ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ

ಚನ್ನಪಟ್ಟಣ.

CC No. 123/2016

CW-2 PW-2

| | |
|---|---|
| ಹೆಸರು | ಃ ಬಸವರಾಜು |
| ಗಂಡನ ಹೆಸರು/ತಂದೆಯ ಹೆಸರು | ಃ ನಂಜೇಗೌಡ |
| ವಯಸ್ಸು | ಃ 48 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ಗುಡ್ಡೆ ತಿಮ್ಮಸಂದ್ರ |

**ದಿನಾಂಕ 17.06.2023 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನನಗೆ ಆರೋಪಿತರು ಗೊತ್ತು. ಆರೋಪಿತರು ನಮ್ಮ ಊರಿನವರು. ಚಾಸಾ1 ನನ್ನ ಸ್ನೇಹಿತ. 2016 ನೇ ಸಾಲಿನಲ್ಲಿ ಚುನಾವಣಾ ನಡೆಯುತ್ತಾ ಇತ್ತು, ರಾತ್ರಿ 8.30 ಗಂಟೆಯ ಸಮಯದಲ್ಲಿ ನಾನು ಹಾಗೂ ಇತರೆ ಜನಗಳು ಗುಂಪಿನಲ್ಲಿ ಕ್ಯಾನ್ವಸ್ ಮಾಡಲು ಹೋಗಿದ್ದು, ಆರೋಪಿತರು ಮತ್ತೊಂದು ಗುಂಪಿನಲ್ಲಿ ಹುಚ್ಚಮ್ಮನ ದೇವಸ್ಥಾನದ ಹತ್ತಿರ ಬಂದು ಚಾಸಾ-1 ರವರ ಜೊತೆ ಆರೋಪಿತರು ಗಲಾಟೆ ಮಾಡುತ್ತಿದ್ದು, ನಾನು ಹಾಗೂ ಇನ್ನು ಇತರೆ ಜನಗಳು ಜಗಳವನ್ನು ಬಿಡಿಸಲು ಹೋಗಿದ್ದು, ನಾವು ಜಗಳವನ್ನು ಬಿಡಿಸಿಕೊಂಡು ಬಂದೆವು ಆ ಸಮಯದಲ್ಲಿ ಆರೋಪಿತರು ನನ್ನನ್ನು ತಳ್ಳಿ ನೂಕಿದರು. ಯಾರೋ ತಳ್ಳಿ ನೂಕಿದರು ಅದನ್ನು

ಹೊರತುಪಡಿಸಿ ಬೇರೆ ಏನೂ ಮಾಡಿಲ್ಲ. ಆರೋಪಿತರು ಏನು ಅಂದರು ಎಂದು ನಾನು ಕೇಳಿಸಿಕೊಂಡಿಲ್ಲ. ನಾನು ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಇಟ್ಟಿಗೆ ಚೂರುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಚಾಸಾ-1 ರವರಿಗೆ ಮುಖದ ಮೇಲೆ ಪೆಟ್ಟಾಗಿತ್ತು. ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡೆದು ಮುಖ ಮೂತಿ ಕಿತ್ತು ಹೋಗಿತ್ತು. ಚಾಸಾ-1 ರವರು ಠಾಣೆಗೆ ಹೋಗಿ ದೂರು ಕೊಟ್ಟು ನಂತರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**<u>ಪಾಟೀ ಸವಾಲುಃ ಎಪಿಪಿಯವರಿಂದಃ</u>**

ದಿನಾಂಕ 13.02.2016 ರಂದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ಇತ್ತು ಎಂದರೆ ಸರಿ. ದಿಃ 12.02.2016 ರಂದು ರಾತ್ರಿ 8.30 ಗಂಟೆಯ ಸಮಯದಲ್ಲಿ ಚಾಸಾ-1 ರಿಂದ 4, ನಾನು ಹಾಗೂ ಇನ್ನು ಕೆಲವರು ಕಾಂಗ್ರೆಸ್ ಪಕ್ಷದ ಪರವಾಗಿ ಮತವನ್ನು ಕೇಳಲು ಹುಚ್ಚಮ್ಮ ದೇವಸ್ಥಾನದ ಹತ್ತಿರ ಬಂದಾಗ ಆರೋಪಿತರು ಅಲ್ಲಿಗೆ ಬಂದು ಚಾಸಾ-1 ರವರಿಗೆ ಕಾಂಗ್ರೆಸ್ ಪಕ್ಷದ ಪರವಾಗಿ ಮತ ಕೇಳಲು ಹೋಗಿದ್ದೀರಾ, ಯೋಗೇಶ್ ರವರು ನಮ್ಮ ಊರಿಗೆ ಏನು ಮಾಡಿದ್ದಾರೆಂದು ಚಾಸಾ1 ರವರ ಮೇಲೆ ಆರೋಪಿತರು ಜಗಳ ತೆಗೆದು ಬೈಯುತ್ತಿದ್ದಾಗ , ಚಾಸಾ1 ರವರು ಮತ್ತು ನಾವೆಲ್ಲಾ ನಮಗೇಕೆ ಬೈಯುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರ ಪೈಕಿ 1 ನೇ ಆರೋಪಿ ಕೈಯಿಂದ ಚಾಸಾ1 ರವರ ಮುಖದ ಮೇಲೆ ಹೊಡೆದು, 2 ಮತ್ತು 3 ನೇ ಆರೋಪಿತರು ಇಟ್ಟಿಗೆ ಚೂರಿನಿಂದ ಚಾಸಾ1 ರವರ ಮುಖದ ಮೇಲೆ ಮತ್ತು ತಲೆಯ ಮೇಲೆ ಹೊಡೆದರು ಎಂದರೆ ಸಾಕ್ಷಿಯು ಕತ್ತಲೆಯಾಗಿದ್ದರಿಂದ ಯಾವುದರಿಂದ ಹೊಡೆದಿರುತ್ತಾರೆಂದು ನೋಡಿಲ್ಲ ಆದರೆ ಹೊಡೆದಿರುತ್ತಾರೆಂದು ನುಡಿಯುತ್ತಾರೆ. 4 ನೇ ಆರೋಪಿ ಹಾಗೂ 5 ನೇ ಆರೋಪಿ ಚಾಸಾ1 ರವರ ಮುಖದ ಮೇಲೆ ಹೊಡೆದು ಗಲಾಟೆ ಮಾಡುತ್ತಿದ್ದಾಗ ನಾನು ಮತ್ತು ಅಲ್ಲಿದ್ದವರು ಚಾಸಾ1 ರವರಿಗೆ ಏಕೆ

ಹೊಡೆಯುತ್ತಿದ್ದೀರಾ ಎಂದು ಬಿಡಿಸಲು ಹೋದಾಗ ಆರೋಪಿತರು ಎಲ್ಲರೂ ನನಗೆ ಕೈಗಳಿಂದ ಹೊಡೆದು ಗಲಾಟೆ ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ3 ಮತ್ತು 4 ರವರುಗಳು ಬಂದು ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿತರು ಚಾಸಾ1 ರವರಿಗೆ ಜೋರಾಗಿ ಕೂಗಾಡುತ್ತಾ ನಿನ್ನನ್ನು ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಇಟ್ಟಿಗೆಯಿಂದಲೇ ಅಂದರೆ ಮು ಮಾ 1 ರಿಂದಲೇ ಆರೋಪಿತರು ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾರೆ ಹೊಡೆದಿರಬಹುದು ಆದರೆ ನೋಡಿಲ್ಲ. ನಾನು ಇದೇ ರೀತಿಯಾಗಿ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.